ಇ)

1987	1988	1989	1990	1991	1992
3	3	2	6	5	ಇಲ್ಲ

ಈ) 1. ದರೋಡೆ ಪ್ರಕರಣಗಳನ್ನು ತಡೆಗಟ್ಟಲು ರಾತ್ರಿ ವೇಳೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಂದ ರಾತ್ರಿ ವೇಳೆಯ ಹೆದ್ದಾರಿ ಗಸ್ತನ್ನು ಏರ್ಪಡಿಸಿದೆ.

2. ಮುಖ್ಯವಾದ ಸ್ಥಳಗಳಲ್ಲಿ ಹೊಂಚು ಹಾಕುವ ಪೊಲೀಸ್ ಸ್ಥಾವರಗಳನ್ನು ಏರ್ಪಡಿಸಿದೆ.

3. ಗೊತ್ತಾದ ಅಪರಾಧಗಳನ್ನು ಎಸಗುವವರ ಚಲನವಲನಗಳ ಕಡೆಗೆ ನಿಗಾ ಇಡಲಾಗಿದೆ. ಸಮಾಜ ವಿರೋಧಿ ವ್ಯಕ್ತಿಗಳ ಮೇಲೆ ಮುಂಜಾಗ್ರತಾ ಕಾಯಿದೆಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

4. ಪೊಲೀಸ್ ಸಂಚಾರಿದಳ ಮತ್ತು ಸಂಪರ್ಕ ಸಾಧನಗಳನ್ನು ಸುಧಾರಿಸಲಾಗಿದೆ.

5. ಅಪರಾಧಗಳನ್ನು ಪತ್ತೆ ಹಚ್ಚಿ ಪ್ರಕರಣಗಳನ್ನು ಪತ್ತೆಮಾಡಲು ಕಷ್ಟಕರವಾದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

6. ಪೊಲೀಸ್ ಅಧಿಕಾರಿಗಳಿಗೆ ಅನುಕೂಲವಾಗುವಂತೆ ಪೊಲೀಸ್ ನಿಯಂತ್ರಣ ಕೋಣೆಗಳನ್ನು ಚುರುಕುಗೊಳಿಸಲಾಗಿದೆ.

ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಕುರಿತು

1669. ಶ್ರೀ ಕೆ. ಪ್ರತಾಪಚಂದ್ರ ರೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಬ್ ಇನ್ಸ್‌ಪೆಕ್ಟರ್‌ರವರ ಹುದ್ದೆಯ ನೇಮಕಾತಿ ಮಾಡಲಾಗುವುದು:

ಆ) ಮಾಡುವುದಾದಲ್ಲಿ ಯಾವಾಗ ಮತ್ತು ಯಾವ ರೀತಿಯಲ್ಲಿ ನೇಮಕಾತಿ ಮಾಡಲಾಗುವುದು:

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಆ) ನೇಮಕಾತಿ ನಿಯಮಗಳಿಗೆ ಕೆಲವೊಂದು ತಿದ್ದುಪಡಿ ಮಾಡಲಾಗುತ್ತಿದೆ. ತಿದ್ದುಪಡಿ ಆದ ನಂತರ ನೇಮಕಾತಿಗಳನ್ನು ಆದಕ್ಕಾಗಿಯೇ ರಚಿಸಲಾಗಿರುವ ನೇಮಕಾತಿ ಸಮಿತಿ ಮುಖಾಂತರ ಮಾಡಲಾಗುವುದು.

ನಾಡ ಕಛೇರಿಗಳಿಗೆ ಟೆಲಿಫೋನ್ ಸೌಕರ್ಯ.

1627. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಡ ಕಛೇರಿಗಳಿಗೆ ಟೆಲಿಫೋನ್ ಸೌಕರ್ಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದರೆ ಸರ್ಕಾರವು ಟೆಲಿಫೋನ್ ಒದಗಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಬ್ಕಾರಿ ಇಲಾಖೆಯಿಂದ ಬಂದ ರಾಜ್ಯಸ್ವದ ಬಗ್ಗೆ.

1185 (1732) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಅಬ್ಕಾರಿ ಇಲಾಖೆಯಿಂದ ಬಂದ ರಾಜಸ್ವ ನಿಧಿಯ (ರೆವಿನ್ಯೂ) ಮೊತ್ತ ಎಷ್ಟು?

(ಪ್ರತಿ ವರ್ಷದ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಆ) ಈ ವರ್ಷಗಳಲ್ಲಿ ಎಷ್ಟು ಗುರಿಯನ್ನು ಇಟ್ಟುಕೊಳ್ಳಲಾಗಿತ್ತು? ಅದರಲ್ಲಿ ಕಳೆದ 3 ವರ್ಷಗಳಿಂದ 31-1-92ರವರೆಗೆ ಬಂದ ರಾಜಸ್ವ ನಿಧಿಯ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

ವರ್ಷ	ರೂ. ಗಳು (ಕೋಟಿಗಳಲ್ಲಿ)
1988-89	258.89
1989-90	327.57
1990-91	429.47

ಆ) ಇಟ್ಟುಕೊಳ್ಳಲಾಗಿದ್ದ ಗುರಿ (ಕೋಟಿಗಳಲ್ಲಿ)

ವರ್ಷ	ಆಯವ್ಯಯ ಅಂದಾಜು	ವಿಮರ್ಶಿತ ಅಂದಾಜು
1988-89	289	280.60
1989-90	320	335.00
1990-91	365	469.00

ರಾಜಸ್ವ ನಿಧಿಯ ಮೊತ್ತ (ಕೋಟಿಗಳಲ್ಲಿ)

1988-89	258.89
1989-90	327.57
1990-91	429.47
1991-92	401.65

(ಜನವರಿ 92ರವರೆಗೆ ಮಾತ್ರ)